# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ತುಮಕೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಸಾಮಾಜಿಕ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿಯವರಿಗೆ ತಡೆಹಿಡಿದಿದ್ದ ಕಡ್ಡಾಯ ನಿರೀಕ್ಷಣ ಅವಧಿಯನ್ನು ಸೇವಾವಧಿ ಎಂದು ಘೋಷಿಸಿರುವುದರಿಂದ ಬಾಕಿ/ಪ್ರಸಕ್ತ ಸಾಲಿನ ವೇತನ ವೆಚ್ಚಕ್ಕಾಗಿ ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸುವ ಬಗ್ಗೆ

**ಓದಲಾಗಿದೆ:**

1. ಸುತ್ತೋಲೆ ಸಂಖ್ಯೆ: ಆಇ 01 ಜಿಪಅ 2014 ದಿನಾಂಕ:1.2.2014
2. ಆರ್ಥಿಕ ವೆಚ್ಚ 5 ಶಾಖೆಯ ಕಡತ ಸಂಖ್ಯೆ: ಆಇ 639 ವೆಚ್ಚ 5/2020 (ಇ)

**ಪ್ರಸ್ತಾವನೆ:**

ತುಮಕೂರು ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಸಾಮಾಜಿಕ ಅರಣ್ಯ ಇಲಾಖೆಯಲ್ಲಿ ತೆರವಾದ ಹುದ್ದೆಗಳು ಭರ್ತಿಯಾದ್ದರಿಂದ ಹಾಗೂ ನಿರೀಕ್ಷಣಾ ಅವಧಿಯ ಬಾಕಿ ವೇತನ/ ಪ್ರಭಾರ ಭತ್ಯೆಯನ್ನು ಮಂಜೂರು ಮಾಡಿರುವುದರಿಂದ ಬಾಕಿ ವೇತನ/ಪ್ರಸಕ್ತ ಸಾಲಿನ ವೇತನವನ್ನು ಸೆಳೆಯಲು ರೂ.23.54ಲಕ್ಷಗಳನ್ನು ಹೆಚ್ಚುವರಿಯಾಗಿ ಲೆಕ್ಕ ಶೀರ್ಷಿಕೆ 2406-00-101-0-26-005ರಡಿ ಒದಗಿಸಿ ಜಿಲ್ಲಾ ಪಂಚಾಯತ್, ತುಮಕೂರಿಗೆ ಬಿಡುಗಡೆಗೊಳಿಸಲು ಪ್ರಸ್ತಾವಿಸಲಾಗಿದೆ.

ಅಗತ್ಯ ದಾಖಲೆ/ಸ್ಪಷ್ಟೀಕರಣ ಮತ್ತು ಲೆಕ್ಕಾಚಾರ ಪಟ್ಟಿಯನ್ನು ಒದಗಿಸಿರುವುದರಿಂದ ಕೋರಿರುವ ರೂ.23.54ಲಕ್ಷ ಅನುದಾನವನ್ನು ಲೆಕ್ಕ ಶೀರ್ಷಿಕೆ 2515-00-196-1-05-300ರಿಂದ ಬಿಡುಗಡೆಗೊಳಿಸಲು ನಿರ್ಣಯಿಸಿ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಆಇ 17 ವೆಚ್ಚ 6/2021(ಇ) ದಿನಾಂಕ: 15ನೇ ಜನವರಿ 2021

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದ ಕಾಲಂ 2ರ ಜಿಲ್ಲಾ ಪಂಚಾಯತಿಗೆ ಕಾಲಂ 3 ಕಾರ್ಯಕ್ರಮದಡಿ ಬಾಕಿ/ಪ್ರಸಕ್ತ ಸಾಲಿನ ವೇತನ ವೆಚ್ಚಕ್ಕಾಗಿ ಅಗತ್ಯವಿರುವ ಅನುದಾನವನ್ನು ಕಾಲಂ 4ರ ಲೆಕ್ಕ ಶೀರ್ಷಿಕೆಯಡಿ ಕಾಲಂ 5ರ ಒಟ್ಟು ರೂ23.54ಲಕ್ಷ (ರೂಪಾಯಿ ಇಪ್ಪತ್ತೂರು ಲಕ್ಷದ ಐವತ್ನಾಲ್ಕು ಸಾವಿರಗಳು ಮಾತ್ರ) ಗಳನ್ನು ಬಿಡುಗಡೆಗೊಳಿಸಿದೆ. ಈ ರೀತಿ ಬಿಡುಗಡೆಗೊಳಿಸಿದ ಅನುದಾನವನ್ನು ಮೇಲೆ (1) ರಲ್ಲಿ ಓದಲಾದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮವಹಿಸಿ ಬಿಲ್ಲುಗಳ ತೀರುವಳಿಗೆ ಕ್ರಮವಹಿಸತಕ್ಕದ್ದು. ಪ್ರಸ್ತುತ ಪ್ರಕರಣಕ್ಕೆ ಆರ್ಥಿಕ ಇಲಾಖೆ ಮರುಹೊಂದಾಣಿಕೆಗೆ ಸಹಮತಿಸಿದೆ ಎಂದು ಭಾವಿಸತಕ್ಕದ್ದು. (ಸೂಚನೆ: ಬಿಡುಗಡೆಗೊಳಿಸಿರುವ ಅನುದಾನವನ್ನು ನಿಧಿ-2ಕ್ಕೆ ಜಮೆ ಮಾಡಿಕೊಂಡು, ನಂತರ ಸಂಬಂಧಪಟ್ಟ ಜಿಲ್ಲಾ ಪಂಚಾಯತಿ ಮುಖ್ಯಲೆಕ್ಕಾಧಿಕಾರಿಗಳು ಮರು ಹೊಂದಾಣಿಕೆ ಆದೇಶವನ್ನು ಈ ಕೆಳಗಿನ ಅಧಿಕಾರಿಗಳಿಗೆ ಸುತ್ತೋಲೆರನ್ವಯ ಪ್ರಸ್ತಾವನೆ ಆರ್ಥಿಕ ಇಲಾಖೆಗೆ ಸಲ್ಲಿಸಿ ಖಜಾನೆಯಲ್ಲಿ ಅಪ್ ಲೋಡ್ ಮಾಡಿಕೊಳ್ಳುವುದು.)

(ರೂ.ಲಕ್ಷಗಳಲ್ಲಿ)

| ಕ್ರಮ ಸಂಖ್ಯೆ | ಜಿಲ್ಲಾ ಪಂಚಾಯತ್ | ಕಾರ್ಯಕ್ರಮದ ಲೆಕ್ಕ ಶೀರ್ಷಿಕೆ | ಲೆಕ್ಕ ಶೀರ್ಷಿಕೆ 2515-00-196-1-05-300ರಡಿ ಬಿಡುಗಡೆಗೊಳಿಸಿದ ಅನುದಾನ | ಒಟ್ಟು |
|---|---|---|---|---|
| 1 | 2 | 3 | 4 | 5 |
| 1 | ತುಮಕೂರು | 2406-00-101-0-26-005 | 23.54 | 23.54 |
| | **ಒಟ್ಟು** | | **23.54** | **23.54** |

ಈ ಕಾರ್ಯವನ್ನು ಆದ್ಯತೆಯ ಮೇಲೆ ಕ್ರಮವಹಿಸತಕ್ಕದ್ದು. ಯಾವುದೇ ಹಂತದಲ್ಲಿ ಅಂದರೆ ಜಿಲ್ಲಾ ಪಂಚಾಯತಿ ಅಥವಾ ಅನುಷ್ಠಾನಾಧಿಕಾರಿಗಳ ಹಂತದಲ್ಲಿ ವಿಳಂಬವಾಗಿ ಅನುದಾನ ವ್ಯಪಗತವಾದಲ್ಲಿ ಮತ್ತೊಮ್ಮೆ ಅನುದಾನವನ್ನು ಒದಗಿಸುವುದಿಲ್ಲವೆಂದು ಮತ್ತು ವಿಳಂಬಗೊಳಿಸಿದ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮವಹಿಸಲಾಗುವುದು.

1415636509
15.1.2021

<u>ಈ ರೀತಿ ಬಿಡುಗಡೆಗೊಳಿಸಿದ ಅನುದಾನದಲ್ಲಿ ಕಾಲಂ 2ರಡಿ ಕಾರ್ಯಕ್ರಮದ ಲೆಕ್ಕ ಶೀರ್ಷಿಕೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ಸಿಬ್ಬಂದಿಯವರುಗಳ ಬಾಕಿ ವೇತನ ವೆಚ್ಚವನ್ನು ಸೆಳೆಯಲು ಖಜಾನೆ–2ರಲ್ಲಿ ಲಭ್ಯಪಡಿಸುವಂತೆ ಹೆಚ್.ಆರ್.ಎಂ.ಎಸ್.ಗೆ ಸೂಚಿಸಿದೆ.</u>

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪುರುಷೋತ್ತಮ್ ಸಿಂಗ್ ಬಿ.ಹೆಚ್.)
ವಿಶೇಷಾಧಿಕಾರಿ(ಜಿ.ಪಂ.) ಹಾಗೂ ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಆರ್ಥಿಕ ಇಲಾಖೆ

1. ಮಹಾಲೇಖಪಾಲರು(ಎ&ಇ) ಲೆಕ್ಕ ಪರಿಶೋಧನೆ 1 & 2, ಕರ್ನಾಟಕ, ಬೆಂಗಳುರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಖಜಾನೆ–2, 7ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಗಾಂಧಿನಗರ, ಬೆಂಗಳೂರು–2ರವರಿಗೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಅರಣ್ಯ ಇಲಾಖೆ
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು
5. ಜಂಟಿ ನಿರ್ದೇಶಕರು, ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
6. ಜಿಲ್ಲಾ ಖಜಾನಾಧಿಕಾರಿಗಳು, ತುಮಕೂರು
7. ಆರ್ಥಿಕ ಇಲಾಖೆ ವೆಚ್ಚ 5 ಶಾಖೆ ಕಡತಕ್ಕೆ
8. ರಕ್ಷಾ ಕಡತಕ್ಕೆ/ ಹೆಚ್ಚುವರಿ ಪ್ರತಿ